IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ತೇಜಸ್ವಿ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆ

ಡಾ. ರಮೇಶ್ ಡಿ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ತುಂಗಾ ಮಹಾ ವಿದ್ಯಾಲಯ,
ಆನಂದಗಿರಿ, ತೀರ್ಥಹಳ್ಳಿ.

ಭಾರತೀಯ ಪ್ರಾಪಂಚಿಕ ಪರಂಪರೆಯಲ್ಲಿ ಪ್ರಕೃತಿಯನ್ನು ಕುರಿತಾದ ವಿಚಾರ ಬಹಳ ತಾತ್ವಿಕ ಹಾಗೂ ಪುರಾತನವಾದದ್ದು. ಜಾಗತೀಕರಣಗೊಂಡ ಇಂದಿನ ಆಧುನಿಕ ಮನಸ್ಸುಗಳಿಗೆ ಇದೊಂದು ಆದಾಯ ರಹಿತ ವಿಚಾರವೇ ಸರಿ. ಇಂದಿನ ನಾಗಾಲೋಟದ ಅಭಿವೃದ್ಧಿ, ಆದಾಯಗಳಿಕೆ, ಬಹುಮಹಡಿಗಳ ಕಾಂಕ್ರೀಟ್ ಬದುಕಿಗೆ ತೆರೆದುಕೊಂಡ ಮನುಷ್ಯ ಪ್ರಪಂಚದ ಆಲೋಚನೆಗೂ ಬಾರದ ವಿಷಯ ಇದಾಗಿದೆ. ಅಲ್ಪ ಸಂಖ್ಯಾತ ಪರಿಸರವಾದಿಗಳ ಹೋರಾಟ, ಪರಿಸರ ಚಿಂತಕರ ಆತಂಕ, ನಿರ್ಲಿಪ್ತ ಸರ್ಕಾರಗಳು, ಮೌನವಹಿಸುವ ಮಾಧ್ಯಮಗಳು, ಶಾಲೆಗಳಲ್ಲಿ ಪಠ್ಯವಾಗಿ ಕೇವಲ ಅಂಕಕ್ಕೆ ಮೀಸಲಾದ ಪರಿಸರ ಅಧ್ಯಯನಗಳು ಹೀಗೆ ಬೇಕು ಬೇಡಗಳ ನಡುವೆ ನಮ್ಮ ಮನುಷ್ಯ ಜೀವನಕ್ಕೆ ಇರುವ ಅನಿವಾರ್ಯ ಸಂಬಂಧಗಳನ್ನು ಕುರಿತು ನಾವಿಂದು ಯೋಚಿಸಬೇಕಿದೆ.

ಆಗಸದ ಬಾಗು, ಚಂದ್ರಮನ ಗುಂಡಿನ ನುಣ್ಪು
ಸಾಗರದ ತೆರೆವಂಕು, ಗಿಡಬಳ್ಳಿ ಬಳುಕು
ಮೇಘ ವರ್ಣಚ್ಛಾಯೆಯೀ ಸೃಷ್ಟಿಯಿಂ ನಮ್ಮೊ
ಳಾಗಿಹುದು ರೂಪರುಚಿ ಮಂಕುತಿಮ್ಮ[1] !!

ನಿತ್ಯ ಕಾಣುವ ಆಗಸದ ನೀಲಿ ಬಾನು, ದುಂಡು ಚಂದಿರನ ನುಣುಪಾದ ರೂಪ, ಕ್ಷಣ ಕ್ಷಣಕ್ಕೂ ಏರಿಳಿತವನ್ನು ಕಾಣುವ ಸಾಗರದ ತೆರೆಮಾಲೆ, ಗಾಳಿಯ ವೈಯ್ಯಾರಕ್ಕೆ ಬಾಗಿ ಬಳುಕುವ ಬಗೆ ಬಗೆಯ ಗಿಡ ಬಳ್ಳಿಗಳು, ಆಗಸದ ನೀಲಿ ಬಾನಿನಲ್ಲಿ ಚಲಿಸುವ ಮೋಡ, ಅದರ ರೂಪ ವರ್ಣ ಗಾತ್ರದ ಬದಲಾವಣೆ ಹೀಗೆ ಜಗದ ರೂಪಿನಲ್ಲೇ ಬದಲಾವಣೆ ಕಾಣುವ 'ಪ್ರಕೃತಿ'ಯು ಎಲ್ಲೂ ಕೂಡ ತನ್ನ ಶ್ರೀಮಂತಿಕೆಯನ್ನು ಸಂಕುಚಿತವಾಗಿಸದೆ, ನವನವೀನವಾದ ದೃಶ್ಯ ಬೆಡಗನ್ನು ಹೊಮ್ಮಿಸುತ್ತಾ ಕಾಲದ ಪರಿಕಲ್ಪನೆಯ ಕಕ್ಷೆಯಲ್ಲಿ ನಿಯಂತ್ರಿತವಾಗಿದೆ. ತನ್ನ ರೂಪಿನಲ್ಲೂ, ಸೌಂದರ್ಯದಲ್ಲೂ ನೂರಾರು ಬೆಡಗುಗಳನ್ನು ತನ್ನೊಳಗೆ ಹೊಂದಿಸಿಕೊಂಡು ಶತಶತಮಾನಗಳ ಕಾಲ ಸರಿದು ಇಂದು ಈ ಗಳಿಗೆಯನ್ನು ಶರವೇಗದಲ್ಲಿ ಕಳೆದು ಎಲ್ಲೂ ನಿಲ್ಲದೆ ತನ್ನ ಪಾಡಿಗೆ ತಾನು ಮುಂದುವರೆಯುತ್ತಿದೆ. ಭೂಮಿ ಸೃಷ್ಟಿಯಾದ ದಿನದಿಂದ ಇಲ್ಲಿಯವರೆಗೂ ನಿರಂತರ ವಿಕಾಸ ಹೊಂದುತ್ತಾ, ಚಕಿತ ಹಾಗೂ ಬೆರಗುಗಳನ್ನು ಮೂಡಿಸುವ ಕೌತುಕ ಮತ್ತು ಸ್ವಾರಸ್ಯವಾದ ವಿಷಯವನ್ನು ಇಂದಿಗೂ ತನ್ನೊಳಗೆ ಹೊಂದಿದೆ.

ಭಾರತೀಯ ಸಮಾಜ ಬಹುತ್ವರೂಪಿಯಾದುದು. ನಮ್ಮ ಸಂವಿಧಾನ ಕೂಡ ಇದನ್ನು ಅಂಗೀಕರಿಸಿದೆ. ಆದರೆ ಜಾಗತೀಕರಣ ಪ್ರವೇಶವಾದ ನಂತರ ಈ ದೇಶದ ಸೌಹಾರ್ದತೆ ಅನೇಕ ರೀತಿಯಲ್ಲಿ ಪಲ್ಲಟಗೊಂಡಿದೆ. ಇದಕ್ಕೆ ಸಾಹಿತ್ಯ ಕೂಡ ಪ್ರತಿಸ್ಪಂದಿಸಿದೆ. ಇಂತಹ ಪ್ರತಿಸ್ಪಂದನೆಯಲ್ಲಿ ತೆಜಸ್ವಿಯವರಂತಹ ಬರಹಗಾರರು ಅಗ್ರಗಣ್ಯರು. ತೇಜಸ್ವಿ ಕನ್ನಡ ಸಾಹಿತ್ಯ-ಸಂಸ್ಕೃತಿ ಚಿಂತನೆಯ ಹೊಸ ದಿಗಂತಗಳ ಬಾಗಿಲುಗಳನ್ನು ತೆರೆಸಿದ ಲೇಖಕ. ಅವರ ಸಾಹಿತ್ಯ ಜಗತ್ತಿನಲ್ಲಿ ಯಾವುದೂ ಜಡವಲ್ಲ. ಕ್ರಿಯಾಶೀಲತೆ, ಚಲನಶೀಲತೆ ಅದರ ಆಶಯಕೇಂದ್ರ. ಅವರ ಸಾಹಿತ್ಯ ವ್ಯಕ್ತಿ ವಿಶಿಷ್ಟ

ಸಿದ್ಧಾಂತದಿಂದ ಜೀವಕೇಂದ್ರಿತ ಜಗತ್ತಿನ ಶೋಧದ ಕಡೆಗೆ ವಿಕಾಸವಾಗುತ್ತಾ ಸಾಗುತ್ತದೆ. 'ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆ ಹೊರತು ಅದರ ಪಾಲಿಗಲ್ಲ' ಎಂದು ಹೇಳುವ ತೇಜಸ್ವಿಯವರು ಪರಿಸರ ಮತ್ತು ಮಾನವ ಸಂಬಂಧಗಳ ಎಳೆಯ ನೆಲೆಗಳನ್ನು ತಮ್ಮ ಕಥನಗಳಲ್ಲಿ ಅಭಿವ್ಯಕ್ತಿಸುತ್ತಾರೆ. ತೇಜಸ್ವಿಯವರು ನಾಯಕ ಪ್ರತಿನಾಯಕ ಅಂತರವನ್ನು ಸೃಷ್ಟಿಸದೆ ಮನುಷ್ಯನು ಸಹ ಈ ವಿಶ್ವದಲ್ಲಿ ಉಳಿದ ಪ್ರಾಣಿ–ಪಕ್ಷಿಗಳಂತೆ ಪ್ರಕೃತಿಯಲ್ಲಿನ ಒಂದು ಭಾಗ ಎಂಬಂತೆ ಸೃಷ್ಟಿಸಿಕೊಂಡು ನಿಗೂಢತೆಯ ಅನ್ವೇಷಣೆಗಿಳಿದು ಅದನ್ನು ಅರ್ಥಮಾಡಿಕೊಳ್ಳಲು ವಿಜ್ಞಾನದ ಆಲೋಚನೆ ಅವಶ್ಯವೆಂದು ತೋರಿಸಿಕೊಟ್ಟಿದ್ದಾರೆ. ರಾಜಕೀಯ ವಿಡಂಬನೆ, ಬದುಕಿನ ಹತಾಶೆ, ಅಸಹಾಯಕತೆಗಳು ಪರಿಸರ ಮತ್ತು ವ್ಯಕ್ತಿತ್ವದ ಘರ್ಷಣೆಯಾದ ಜೀವನದಲ್ಲಿ ಸಂವೇಧನೆಯನ್ನು ಮಾತ್ರ ಸ್ವತಂತ್ರವಾಗಿ ಉಳಿಸಿಕೊಂಡು ಹೋಗುವುದೇ ಅದರ ಮೂಲ ಕರ್ತವ್ಯ ಎಂಬ ತತ್ವವನ್ನು ನಾವಿಲ್ಲಿ ಕಾಣಬಹುದು.

'ಪರಿಸರ' ಎಂಬ ಪರಿಕಲ್ಪನೆ ಕಾಡು, ಅರಣ್ಯ, ವನ, ಕಾನನ, ನಿಸರ್ಗಧಾಮ ಹೀಗೆ ಬಹುನಾಮಗಳಿಂದ ವರ್ಣಿತವಾಗಿರುವ ಸಸ್ಯಕಾಶಿಯು ತೇಜಸ್ವಿಯವರ ಸಾಹಿತ್ಯದಲ್ಲಿ ಒಮ್ಮೆ ಚೈತನ್ಯದ ತಪಃನಿಧಿಯಾಗಿ, ಮತ್ತೊಮ್ಮೆ ನಿಗೂಢ ಲೋಕವಾಗಿ, ಮಗದೊಮ್ಮೆ ಭೀಕರ, ಗಂಭೀರ, ಭಯಂಕರ ರುದ್ರ ರಮಣೀಯವಾಗಿ ವರ್ಣಿತವಾಗಿದೆ. ತೇಜಸ್ವಿಯವರು ಪ್ರಕೃತಿಯ ಸಮಷ್ಟಿ ಸೃಷ್ಟಿಕ್ರಿಯೆಯನ್ನು ಸಮಗ್ರವಾದ ಚಿತ್ರಣದೊಂದಿಗೆ ಸೂಕ್ಷ್ಮಾತಿ ಸೂಕ್ಷ್ಮ ವಿವರಣೆಯನ್ನು ಕಾಲದೊಂದಿಗೆ ಸಂವಾದಿಸುತ್ತಲೇ ಅದಕ್ಕೊಂದು ಜೀವಂತಿಕೆಯ ನೆಲೆಗಟ್ಟನ್ನು ಓದುಗರ ಮನೋಪಟಲದಲ್ಲಿ ನಿರ್ಮಿಸಿಬಿಡುತ್ತಾರೆ. ಕೆಲವೊಮ್ಮೆ ಬಹಳ ಸ್ವಾರಸ್ಯಕರವಾದ ಕಥಾಘಟನೆಗಳಿಂದ ಕೂಡಿದ ರೋಚಕತೆಯನ್ನು ಸೃಷ್ಟಿಸಿ ಪ್ರಕೃತಿಯ ಗಂಭೀರತೆಯನ್ನು ನೀರವ ಮೌನದೊಂದಿಗೆ ಕೌತುಕತೆಯ ನಿರೂಪಣಾ ಬಂಧದಲ್ಲಿ ಮೈಮರೆಸಿ ಓದುಗರನ್ನು ಮಂತ್ರಮುಗ್ಧರನ್ನಾಗಿಸುವ ಕಾನನದ ಅನುಭವಗಳು ವಿಸ್ಮಯ ಜಗತ್ತನ್ನೇ ಪರಿಚಯಿಸುತ್ತವೆ.

ಮನುಷ್ಯ ತನ್ನೆಲ್ಲಾ ಅಗತ್ಯಗಳನ್ನು ಈ ಪರಿಸರದಿಂದಲೇ ಪಡೆಯಬೇಕು. ಅದು ಭೌತಿಕವಾಗಿರಲಿ, ಆಧ್ಯಾತ್ಮಿಕ (ಆಂತರಿಕ)ವಾಗಿರಲಿ. ಬದುಕಲು ಇವೆರಡೂ ಬಹಳ ಮುಖ್ಯ. ಭೂಮಿಯಲ್ಲಿ ಸಕಲ ಜೀವರಾಶಿಗಳೂ ಅವುಗಳ ದೇಹ ಪ್ರಕೃತಿಗೆ ಅನುಸಾರವಾಗಿ ಬದುಕಲು ಯೋಗ್ಯವಾದ ಪರಿಸರದಲ್ಲಿ ಜೀವಿಸುವುದು ಸೃಷ್ಟಿ ನಿಯಮದ ಅದ್ಭುತಗಳಲ್ಲಿ ಒಂದಾಗಿದೆ. ಸೃಷ್ಟಿಯ ಜೀವಿ ಜಗತ್ತಿನಲ್ಲಿ ಮನುಷ್ಯನನ್ನು ಹೊರತುಪಡಿಸಿ ಎಲ್ಲ ಜೀವಿಗಳು ಬದುಕಲು ತಮ್ಮ ನೆಚ್ಚಿನ ಪರಿಸರವನ್ನು ಆಶ್ರಯಿಸುತ್ತದೆ. ಮನುಷ್ಯ ಈ ವಿಚಾರದಲ್ಲಿ ಸಾಕಷ್ಟು ವಿಭಿನ್ನವಾದ ಸಾಧನೆಯನ್ನು ಮಾಡಿದ್ದರೂ ಅದರಿಂದ ಪೂರ್ಣ ಯಶಸ್ಸು ಕಂಡುಕೊಂಡಿಲ್ಲ. ಹಾಗಂತ ತನ್ನ ಪ್ರಯತ್ನವನ್ನೂ ಬಿಟ್ಟಿಲ್ಲ. ಈ ಭೂಮಿ ನಿರ್ಮಾಣಗೊಂಡು ಮಿಲೇನಿಯಂ ವರ್ಷಗಳೇ ಕಳೆದಿರಬೇಕು. ಆದರೆ ಜೀವಿಗಳು ಬದುಕಲು ಯೋಗ್ಯವಾದ ಪರಿಸರ ನಿರ್ಮಾಣವಾಗಲು ಸಹಸ್ರ ವರ್ಷಗಳೇ ಕಳೆದಿರಬೇಕು. ಪರಿಸರದ ಮಾರ್ಪಾಟಿನ ಜೊತೆ ಜೊತೆಗೇ ಜೀವಿಗಳ ಸೃಷ್ಟಿ ಕ್ರಿಯೆಯೂ ಪ್ರಾರಂಭವಾಗಿರಬೇಕು. ಎಲ್ಲ ಜೀವಿಗಳಿಗೂ ಜೀವಿಸಲು ಪರಿಸರವೇ ಮೂಲವಾಗಿದೆ. ಮನುಷ್ಯ ಇತರ ಜೀವಿಗಳ ಜೊತೆಗೆ ಹೊಂದಿಕೊಂಡು ಇಲ್ಲವೇ ಅವುಗಳನ್ನೇ ಆಶ್ರಯಿಸಿಕೊಂಡು ಬದುಕನ್ನು ರೂಪಿಸಿಕೊಂಡಿದ್ದಾನೆ. ಪ್ರಕೃತಿಯ ಭಾಗವೇ ಆದ ಕಾಡು, ನದಿ, ಪ್ರಾಣಿ ಜಗತ್ತು, ಬೇಟೆ, ಕೃಷಿ, ಹಳ್ಳಿಗಳು ಮತ್ತು ಯಾಂತ್ರಿಕ ನಗರಗಳು ಹೀಗೆ ಎಲ್ಲಾ ಸ್ತರದ ಪರಿಸರದಲ್ಲೂ ಮನುಷ್ಯ ಬದುಕಲು ಕಲಿತುಕೊಂಡಿದ್ದಾನೆ. ಮನುಷ್ಯನ ಬದುಕನ್ನು ಹೊರತುಪಡಿಸಿ ಇತರ ಜೀವಜಗತ್ತನ್ನು ಗಮನಿಸಿದಾಗ ಇಡೀ ಭೂಮಂಡಲ ಅನೇಕ ನಿಗೂಢ, ಕೌತುಕವನ್ನು ಹುಟ್ಟಿಸುವ ಅಚ್ಚರಿಗಳ ಸಾಗರವೇ ಆಗಿದೆ. ಕಂಡಷ್ಟೂ ವಿಸ್ಮಯಗಳು ನಮ್ಮನ್ನು ಚಕಿತಗೊಳಿಸುತ್ತವೆ.

ಕನ್ನಡ ಸಾಹಿತ್ಯದಲ್ಲಿ ಕುವೆಂಪು, ಕಾರಂತ, ತೇಜಸ್ವಿ, ನಾಗೇಶ್ ಹೆಗಡೆಯವರಂತಹ ಬರಹಗಾರರ ಬರಹಗಳಲ್ಲಿ ಮಾತ್ರ ಇಂತಹ ಸೃಷ್ಟಿ–ಪ್ರಕೃತಿ–ಪರಿಸರದ ಚಿತ್ರಣಗಳನ್ನು ಕಾಣಬಹುದು. ಅದರಲ್ಲೂ ಕುವೆಂಪು ಮತ್ತು ತೇಜಸ್ವಿಯವರ ಬರಹದಲ್ಲಿ ಇವು ಪಾತ್ರಗಳಾಗಿ, ಸನ್ನಿವೇಷಗಳಿಗೆ ಪೂರಕವಾಗಿ ಸಾಹಿತ್ಯದಲ್ಲಿ ಸೃಜತೆಯ ಬೆಡಗನ್ನು ಹೊಂದಿರುವುದೇ ಬಹಳ ವಿಶೇಷವಾದ ಅಂಶವಾಗಿದೆ. ಪ್ರಕೃತಿಯು ಕುವೆಂಪು ಅವರಲ್ಲಿ ಸಮಗ್ರವಾದ ಚಿತ್ರಣವಾಗಿ ಮೂಡಿಬಂದರೆ, ತೇಜಸ್ವಿಯವರ ಬರಹದಲ್ಲಿ ಇನ್ನೂ ಸೂಕ್ಷ್ಮವಾದ ವಿವರಗಳೊಂದಿಗೆ ಅಭೇದ್ಯವಾದ ಮಿಳಿತದಲ್ಲಿ ವೈವಿಧ್ಯತೆಯ ಬೆಡಗಿನಲ್ಲಿ ಪ್ರಕೃತಿ ಮತ್ತು ಪರಿಸರದ ಚಿತ್ರಣಗಳು ಮೂಡಿಬಂದಿವೆ.

ಸುಮಾರು ನೂರೈವತ್ತು ವರ್ಷಗಳ ಸಹ್ಯಾದ್ರಿ ಪರಿಸರದ ಸ್ಥಿತಿಗತಿಗಳು ತೇಜಸ್ವಿಯವರ ಬರಹಗಳಲ್ಲಿ ಎದ್ದುಕಾಣುತ್ತದೆ. ಇವರ ಬರಹಗಳ ಮೂಲ ಆಕರ ಪ್ರಕೃತಿಯೇ ಆಗಿದ್ದು ಪ್ರಕೃತಿಯನ್ನೇ ಆಶ್ರಯಿಸಿಕೊಂಡ ಜೀವಜಗತ್ತು ಅನಾವರಣಗೊಳ್ಳುತ್ತದೆ. ವಸಾಹತುಶಾಹಿ ಜೀವನಕ್ರಮದಿಂದ ಆದ ಬದಲಾವಣೆಗಳು, ಹೊಸದಾಗಿ ರೂಪಿಸಿಕೊಂಡ ಮನುಷ್ಯನ ಜೀವನ ಶೈಲಿ ಮತ್ತು ಪರಿಸರದ ಜೊತೆಗಿನ ಒಡನಾಟ, ಅದರಲ್ಲಿ ಆದ ಬದಲಾವಣೆಯನ್ನು ಇವರ ಬರಹಗಳಲ್ಲಿ ಕಾಣಬಹುದು. ಇವರ ಸಾಹಿತ್ಯದ ಬಹುಭಾಗ ಪ್ರಕೃತಿಯಾಗಿದ್ದು ಪ್ರಕೃತಿಯು ಕೃತಿ ಮತ್ತು ಕೃತಿಕಾರರ ಆಧ್ಯಾತ್ಮಿಕ ಸಾಧನೆಯ ಭಾಗವೂ ಆಗಿದೆ. ಇವರ ಸಾಹಿತ್ಯದಲ್ಲಿ ಪ್ರಕೃತಿ ಕೇವಲ ವಸ್ತುವಾಗಿ, ಭೌತಿಕ ಚಿತ್ರಣವಾಗಿ ಅಥವಾ ವರ್ಣನೆಯ ಭಾಗವಾಗಿ

ಬಂದಿಲ್ಲ. ಬದಲಾಗಿ ಜೀವಂತವಾದ ಚಿತ್ರಣದೊಂದಿಗೆ ಸಾಧಕನೊಬ್ಬನ ಕರ್ಮಭೂಮಿಯಾಗಿ ಗೋಚರಿಸುತ್ತದೆ. ಸಣ್ಣ ಜೀವಿಗಳಾದ ಇರುವೆ ಜಿಗಣೆಗಳಿಂದ ಹಿಡಿದು ಕಾಡು ಹಂದಿ, ಮುಳ್ಳಿನ ಹಂದಿ, ಕಾಡು ಕುರಿ, ತೋಳ, ಹುಲಿ, ಜಿಂಕೆ, ಆನೆ, ಮೀನು, ಓತಿ, ನಾಯಿ, ದನ–ಕರು, ಪಕ್ಷಿ ಸಂಕುಲ.... ಹೀಗೆ ಎಲ್ಲಾ ತರಹದ ಸಹ್ಯಾದ್ರಿ ಪರಿಸರದ ಜೀವಜಗತ್ತೇ ಅನಾವರಣವಾಗುತ್ತದೆ. ಅದೇ ರೀತಿ ಕಲ್ಲು ಸಂಪಿಗೆ ಹಣ್ಣು, ಬೊಮ್ಮಾರಲ ಹಣ್ಣು, ಕರ್ಜಿ ಹಣ್ಣು, ಕಾರೆ ಹಣ್ಣು, ಕಾಕಿ ಹಣ್ಣು, ಹುಳಿಚೊಪ್ಪಿನ ಹಣ್ಣು ಹೀಗೆ ಇನ್ನೂ ಏನೇನೋ ಹೆಸರಿಲ್ಲದ ಆದರೆ ರುಚಿಯಿರುವ ಹಣ್ಣುಗಳು. ಗಿರಿ, ಬೆಟ್ಟ, ಗುಡ್ಡ, ತಂಗಾಳಿ, ಅದರೊಂದಿಗಿನ ಏಕಾಂತ ಧ್ಯಾನ ಮತ್ತು ಪ್ರಕೃತಿಯ ಉಪಾಸನೆ ಇವೆಲ್ಲವೂ ತೇಜಸ್ವಿಯವರ ಬರಹಗಳಲ್ಲಿ ಮೈತಳೆದಿವೆ.

ತೇಜಸ್ವಿಯವರ ದೃಷ್ಟಿಯಲ್ಲಿ ಪರಿಸರ ಎಂದರೆ ಜೀವಜಂತುಗಳು, ಕಾಡು, ಕಣಿವೆ, ಘಟ್ಟಪ್ರದೇಶಗಳಷ್ಟೇ ಅಲ್ಲ. ಅವರ ಸುತ್ತಮುತ್ತಲ ಗಾರೆ ಸೀನಪ್ಪ, ಗಾಡ್ಲಿ, ಯಂಕ್ಟ, ಪ್ಯಾರಾ, ಮಂದಣ್ಣ, ಲಿಂಗ, ಪ್ರೀತಿಯ ನಾಯಿ ಕಿವಿ.... ಹೀಗೆ ಮನುಷ್ಯ ಬಳಗದ ಜೊತೆಗೆ ಪ್ರಾಣಿ ಮತ್ತು ಪರಿಸರಗಳ ಅವಿನಾಭಾವ ಸಂಬಂಧಗಳು ಲೋಕಸಹಜ ವ್ಯಾಪಾರದಂತೆ ನವಿರಾದ ಬಂಧದಲ್ಲಿ ಅವರ ಕಥೆಗಳು ಸಾಗುತ್ತವೆ.

'ಕಾಡು ಮತ್ತು ಕ್ರೌರ್ಯ' ಕಾದಂಬರಿಯಲ್ಲಿ ತೇಜಸ್ವಿಯವರು "ಗುಮ್ಮನ ಕಾನು, ಹುಲಿಯೂರಿನ ಸರಲು ಹೀಗೆ ನಿರ್ದೇಶಿತವಾದ ಸಾಂದ್ರವಿಪಿನ ಅಲ್ಲಿ ಎಲ್ಲ ಕಡೆಗೂ ಸರ್ವಾಂತರ್ಯಾಮಿಯಾಗಿತ್ತು. ಅಲ್ಲಿ ಕಾಡು ಯಾವಾಗಲೂ ಋತುಬೇಧವನ್ನೇ ತೋರದೆ ನಿರಂತರವೂ ಹಚ್ಚ ಹಸುರಾಗಿಯೇ ಕಾಣುತ್ತದೆ. ಜನನ ಮರಣ, ಸುಖ–ದುಃಖಗಳ ವೈಪರೀತ್ಯಮಯವಾದ ಮಾನವನಿಗೆ ಈ ಕಾನನದ ಚಿರ ಯೌವ್ವನವೇ ಕಠೋರವಾಗಿ ತೋರುತ್ತದೆ.... ಗಾಳಿ, ಮಳೆ, ಆ ಪಾರ್ಶ್ವವನ್ನೇ ಶಿಥಿಲಗೊಳಿಸುವಂತಿತ್ತು. ಭೋರ್ಗರೆಯುವ ಮಳೆ, ಬೀಸುವ ಗಾಳಿ, ಉಬ್ಬಿ ಕೊಚ್ಚುವ ಹಳ್ಳ, ಕಾಡಿನಿಂದ ಇದ್ದಕ್ಕಿದ್ದಂತೆ ಬಂದು ದನಗಳನ್ನು ಕಬಳಿಸುವ ಹುಲಿ, ರಾತ್ರೋರಾತ್ರಿ ಗದ್ದೆಗೆ ನುಗ್ಗಿ ಬತ್ತವನ್ನು ಬುಡಮೇಲು ಮಾಡುವ ಹಂದಿ, ಒಂದೇ ಎರಡೇ? ಕ್ರೌರ್ಯಕ್ಕೆ ಕ್ರೌರ್ಯವಾಗಿ ಕಾಡು ಪರ್ವತಾದ್ರಿಗಳವರೆಗೆ ತನ್ನ ಕಬಂಧ ಹಸ್ತವನ್ನು ಚಾಚಿತ್ತು" ಎನ್ನುವ ಮಾತುಗಳನ್ನು ಗಮನಿಸಿದರೆ ಕಾಡು ಎಷ್ಟೊಂದು ಸೊಂಪಾಗಿತ್ತು ಎಂಬುದು ಗೊತ್ತಾಗುತ್ತದೆ.

ತೇಜಸ್ವಿಯವರ 'ನಿಗೂಢ ಮನುಷ್ಯರು' ಕಿರು ಕಾದಂಬರಿಯಲ್ಲಿ ಬರುವ ಮಳೆಯ ಚಿತ್ರಣ ಕಾದಂಬರಿಯ ಎಲ್ಲಾ ಪಾತ್ರಗಳಿಗಿಂತಲೂ ಅತೀ ಹೆಚ್ಚುಪ್ರಭಾವಶಾಲಿಯಾಗಿ ಕಾಣುತ್ತದೆ. ಕಾದಂಬರಿಯ ಶೀರ್ಷಿಕೆಯೇ ಸೂಚಿಸುವಂತೆ, ಇಲ್ಲಿ ಮನುಷ್ಯರಿಗಿಂತಲೂ ಹೆಚ್ಚಾಗಿ 'ಪರಿಸರ'ವೇ ಒಂದು ನಿಗೂಢ ಶಕ್ತಿಯಾಗಿ ಕಾಣಿಸಿಕೊಳ್ಳುತ್ತದೆ. ಕಾಡಿನಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳು ಮತ್ತು ಬೇಟೆಯಾಡುವವರ ಮನಸ್ಥಿತಿಯನ್ನು ಅನಾವರಣಗೊಳಿಸುತ್ತ, ಕಾಡಿನ ಸಮತೋಲನ ತಪ್ಪಿದರೆ ಅದು ಮನುಷ್ಯ ಕುಲಕ್ಕೇ ಹೇಗೆ ಆಪತ್ತಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡುತ್ತಾರೆ. ಅವರು ಪರಿಸರವನ್ನು ಒಂದು 'ವಿಸ್ಮಯ ಲೋಕ'ವಾಗಿ ಚಿತ್ರಿಸುತ್ತಾ, ಅದನ್ನು ಉಳಿಸಿಕೊಳ್ಳದಿದ್ದರೆ ಮನುಷ್ಯನೂ ಸಹ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂಬ ಸತ್ಯವನ್ನು ನಮಗೆ ಮನವರಿಕೆ ಮಾಡಿಕೊಡುತ್ತಾರೆ.

"ಎಲ್ಲಾ ಶುರುವಾಗಿದ್ದು ಕಿರಗೂರಿನಮೇಲೆ ಮೂರು ರಾತ್ರಿ ಮೂರು ಹಗಲು ಇದ್ದಕ್ಕಿದ್ದಂತೆ ಬೀಸಿದ ಬಿರುಗಾಳಿ ದೆಸೆಯಿಂದ" ಎಂದು ಆರಂಭವಾಗುವ 'ಕಿರಗೂರಿನ ಗಯ್ಯಾಳಿಗಳು' ಕಥೆಯ ಪ್ರಾರಂಭವೇ ಮಳೆ ಮತ್ತು ಗಾಳಿಯ ಅವಾಂತರದೊಂದಿಗೆ ಅನೇಕ ತಲ್ಲಣಗಳನ್ನು ಸೃಷ್ಟಿಸಿಬಿಡುತ್ತದೆ. "ನಾ ಹುಟ್ಟಿದ ಲಗಾಯ್ತಿಂದ ಇಂಥ ಗಾಳಿ ನೋಡಿರಲಿಲ್ಲ. ಎಂತೆಂಥ ಮಳೆ ಗಾಳಿ ಕಂಡಿದ್ದೇನೆ. ಇಂಥ ಗಾಳಿ ನೋಡಿದ್ದು ನೆನಪಿಲ್ಲ" ಎಂದು ಮುಪ್ಪಿನ ಮುದಿ ಅಜ್ಜ ಕಾಳೇಗೌಡನ ತಂದೆ ಉದ್ಗರಿಸಿದ ಮಾತುಗಳು ಸಹ್ಯಾದ್ರಿ ತಪ್ಪಲಿನ ಗಾಳಿಯ ಆರ್ಭಟವನ್ನು ಪರಿಚಯಿಸುತ್ತದೆ. "ಅವಕಾಶ ಸಿಕ್ಕಿದರೆ ಕೋಟೆ ಕೊತ್ತಲಗಳ ಹೆಗ್ಗಲ್ಲುಗಳನ್ನೇ ಬೇರುಗಳಿಂದ ಮೀಟಿ ಉರುಳಿಸಿ ಬೆಳೆದು ನಿಲ್ಲುವ ಶಕ್ತಿಯಿದೆ ಕಾಡಿಗೆ" ಎಂಬ 'ಜುಗಾರಿ ಕ್ರಾಸ್' ಕಾದಂಬರಿಯ ಮಾತುಗಳು ಪ್ರಕೃತಿಯ ವಾಸ್ತವ ಶಕ್ತಿಯ ಅರಿವನ್ನು ಗಟ್ಟಿಗೊಳಿಸುತ್ತವೆ.

ತೇಜಸ್ವಿಯವರಿಗೆ 'ಪರಿಸರ' ಗೌಪ್ಯ, ಕುತೂಹಲ, ರಹಸ್ಯಗಳನ್ನು ಕೆರಳಿಸುವ ಚೈತನ್ಯವಾಗಿದೆ. 'ಕರ್ವಾಲೊ' ಕೃತಿಯಲ್ಲಿ ಕಾಡನ್ನು ಪಾತ್ರಗಳ ದೃಷ್ಟಿಕೋನದಲ್ಲಿ ನೋಡುವ ಪರಿ, ಅದಕ್ಕೆ ಪಾತ್ರಗಳು ಪ್ರತಿಕ್ರಿಯಿಸುವ ನೆಲೆಗಳು ಓದುಗರನ್ನು ವಾಸ್ತವ ಕುತೂಹಲ ಪ್ರಪಂಚದೆಡೆಗೆ ಸೆಳೆಯುತ್ತದೆ. ಕಾಡಿನಲ್ಲಿ ಓಡಾಡುವ ಕರ್ವಾಲೊ, ಪ್ರಭಾಕರ ಇವರು ತೇಜಸ್ವಿಯವರಿಗೆ ಹಲವು ಕಾರಣಗಳಿಂದ ಆಸಕ್ತಿ ಉಕ್ಕಿಸುವ ಕೇಂದ್ರ ಇಲ್ಲವೇ ಪ್ರಯೋಗಶಾಲೆಯಾದರೆ, ಅದೇ ಕಾಡಿನಲ್ಲಿ ಅಲೆದಾಡುವ ಮಂದಣ್ಣ, ಕರಿಯಪ್ಪ, ಎಂಗ್ಟರು ದೈನಂದಿನ ಚಟುವಟಿಕೆಗಳ ಬದುಕಿನ ಭಾಗವಾಗಿ ಕಾಣುತ್ತಾರೆ. ಈ ಕಾದಂಬರಿಯು ಕೇವಲ ಒಂದು ಅಪರೂಪದ 'ಹಾರುವ ಓತಿ'ಯನ್ನು ಹುಡುಕುವ ಕಥೆಯಲ್ಲ; ಅದು ಮನುಷ್ಯ ಮತ್ತು ಪ್ರಕೃತಿಯ ನಡುವಿನ ಗಾಢವಾದ ಸಂಬಂಧವನ್ನು ಶೋಧಿಸುವ ಅದ್ಭುತ ಕೃತಿ. ಪ್ರಕೃತಿಯ ಸೂಕ್ಷ್ಮಗಳನ್ನು ಅರಿಯುವಲ್ಲಿ ಪಾಶ್ಚಿಮಾತ್ಯ ವಿಜ್ಞಾನಕ್ಕಿಂತಲೂ ಈ

ಸ್ಥಳೀಯರ 'ಅನುಭವಜನ್ಯ ಜ್ಞಾನ' (Indigenous Knowledge) ಎಷ್ಟು ಪರಿಣಾಮಕಾರಿ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಓತಿಯನ್ನು ಹಿಡಿಯಲು ಹೊರಟ ತಂಡವು ಕಾಡಿನ ಒಳಹೋದಂತೆ, ತಮ್ಮಲ್ಲಿರುವ ಅಹಂಕಾರವನ್ನು ಕಳೆದುಕೊಂಡು ಪ್ರಕೃತಿಯ ಒಂದು ಭಾಗವಾಗುವುದೇ ಇಲ್ಲಿನ ಪರಿಸರ ಪ್ರಜ್ಞೆಯ ಅತ್ಯಂತ ಸುಂದರ ರೂಪವಾಗಿ ಕಾಣುತ್ತದೆ.

ಹಿಂಸೆಗೆ ಪ್ರತಿರೋಧ ಒಡ್ಡುವ ಜೀವಿಗಳಿಗೆ ತಮ್ಮ ಅಸ್ತಿತ್ವದ ಉಳಿವಿಗೆ ಪ್ರತಿಹಿಂಸೆಯ ಆಯ್ಕೆ ಅನಿವಾರ್ಯ ಕೂಡ ಆಗಿರುತ್ತದೆ. ಮಾನವೀಯತೆಯ ಅಂಶಗಳನ್ನು ಮೀರಿದ ಜೀವ ಸಂಕೋಲೆಯ ವ್ಯಾಪಾರ ಈಗಾಗಲೇ ಸೃಷ್ಟಿಯಲ್ಲಿ ಸಂರಚನೆಗೊಂಡಿದೆ. ಅದನ್ನು ಮೀರಲು ಅಥವಾ ಮುರಿಯಲು ಸಾಧ್ಯವಾಗದು ಎಂಬ ವಿಷಯ ತೇಜಸ್ವಿಯವರ ಬರಹಗಳಿಂದ ತಿಳಿಯುತ್ತದೆ. ಪ್ರಕೃತಿಯ ವೈವಿಧ್ಯಮಯ ಜೀವ ಸಂಕೋಲೆಯಲ್ಲಿ ಮನುಷ್ಯ ಓರ್ವ ಅಸಹಾಯಕ ಬುದ್ಧಿವಂತ ಜೀವಿ. ಆದರೆ ಅವನೂ ಕೂಡ ಈ ಸಂಕೋಲೆಯೊಳಗೆ ಒಬ್ಬ ಬಂಧಿಯೂ ಹೌದು. ಇದನ್ನು ವಿರೋಧಿಸಲಾಗಲೀ ಅಥವಾ ಇದರಿಂದ ಬಿಡುಗಡೆಯಾಗಲೀ ಸಾಧ್ಯವಿಲ್ಲ. ಇದನ್ನು ಒಪ್ಪಿಕೊಂಡು ನಾವು ಕಾಣದ ಅಪಾಯಕಾರಿ ಸೂಕ್ಷ್ಮಾತಿ ಸೂಕ್ಷ್ಮ ಜೀವಿಗಳ ಶಿಕಾರಿಗೆ ಎದೆಕೊಟ್ಟು ನಿಲ್ಲಬೇಕಿದೆ.

ಹಳ್ಳಿಯಲ್ಲಿ ಭತ್ತಕ್ಕೆ ಬರುವ ಹಂದಿ ಕತೆಗಾರರ ಗಿಡ್ಡ ತಳಿಯ ಭತ್ತವನ್ನು ಮುಟ್ಟದೆ ಪಕ್ಕದ ಮನೆಯ ಎತ್ತರದ ಭತ್ತಕ್ಕೆ ಲಗ್ಗೆ ಹಾಕುವುದು, ಕೋತಿಗಳನ್ನು ಬಂದೂಕಿನಿಂದ ಸುಟ್ಟು ಓಡಿಸುವುದು, ಸಾರಾಯಿ ಮತ್ತು ದೊಣ್ಣೆಯನ್ನು ಕೋತಿಗಳಿಗಾಗಿ ಇಡುವುದು, ಕೋತಿಗಳು ಬೋನಿನಲ್ಲಿ ಸಿಕ್ಕಿಹಾಕಿಕೊಳ್ಳುವ ದೃಶ್ಯಗಳನ್ನು ಕಥೆಗಾರರ ಸಹಪಾತ್ರಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತವೆ. ಮನುಷ್ಯರ ನಡುವೆಯೇ ಲೆಕ್ಕಕ್ಕೇ ಸಿಗದ ಅಗಣಿತ ಕೀಟ, ಪ್ರಾಣಿ ಪ್ರಪಂಚದಲ್ಲಿ ಬದುಕುತ್ತಿದೆ. ಈ ಜೀವ ಪ್ರಪಂಚದೊಳಗೆ ನಮಗೆ ನಮ್ಮ ವ್ಯಸನವೇ ಹಿರಿದಾಗಿ ಕಾಣುತ್ತದೆ. ಸೃಷ್ಟಿಯಲ್ಲಿ ಭೂಮಿ ಎಂಬುದು ಮನುಷ್ಯನಿಗಾಗಿ ಮಾತ್ರ ನಿರ್ಮಾಣವಾದ ಉಪಭೋಗ ವಸ್ತುವಲ್ಲ. ಇಲ್ಲಿನ ನೀರು, ಗಾಳಿ, ಭೂಮಿ, ಸೂರ್ಯ, ಆಗಸದ ಪರಿಸರವನ್ನು ಆಶ್ರಯಿಸಿ ಬದುಕುತ್ತಿರುವ ನಮ್ಮ ನೆರೆ ಹೊರೆ ಜೀವ ಜಗತ್ತಿನ ಮೇಲೆ ನಾವು ಈಗಲಾದರೂ ಸೌಹಾರ್ದತೆಯಿಂದ ಬದುಕಬೇಕಿದೆ. ಇಲ್ಲವಾದರೆ ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳಿಗೆ ಯಾವ ಅರ್ಥವೂ ಇಲ್ಲದಾಗುತ್ತದೆ. ಇದರಿಂದ ಮುಂದೆ ಯಾವ ವಿನಾಶ ನಮಗೆ ಕಾದಿರುವುದೋ ಗೊತ್ತಿಲ್ಲ.

"ಆಧುನಿಕ ತಂತ್ರಜ್ಞಾನ ಮತ್ತು ವಿಜ್ಞಾನಗಳ ಸಹಾಯದಿಂದ ಮನುಷ್ಯ ತಾನು ಉರುಳಿಸಿದ ವಿನಾಶ ಚಕ್ರವನ್ನು ಪ್ರಕೃತಿ ಹಿಮ್ಮರಳಿಸಿದ ಎಷ್ಟೋ ಉದಾಹರಣೆಗಳುಂಟು. ತಾನು ಕೊನೆಗೂ ತನ್ನ ಒಡಹುಟ್ಟಿದ ಸರ್ವಚರಾಚರ ವಸ್ತುಗಳೊಂದಿಗೇ ಬದುಕಬೇಕೆಂಬ ಸತ್ಯವನ್ನು ಮನುಷ್ಯ ಮನಗಾಣತೊಡಗಿದ್ದಾನೆ. ಈ ಆಹಾರ ಪಿರಮಿಡ್ಡಿನ ಯಾವೊಂದು ಜೀವಸಂತಾನದ ಅಳಿವೂ ಕೊನೆಗೆ ಮುಂಬರಲಿರುವ ತನ್ನ ನಿರ್ವಂಶದ ಮುನ್ನುಡಿಯೇ ಎಂದು ಮಾನವನಿಗೆ ನಿಧಾನವಾಗಿ ಅರಿವಾಗುತ್ತಿದೆ"[2] ಎಂಬ ತೇಜಸ್ವಿಯವರ ಕಾಲಜ್ಞಾನದ ನುಡಿ ಆಧುನಿಕ ಜಗತ್ತಿಗೆ ಎಚ್ಚರಿಕೆಯ ಗಂಟೆಯಾಗಿ ಕಾಣುತ್ತದೆ. ಪರಿಸರವನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಕಾಣುವ ಇವರ ತಾತ್ವಿಕ ನುಡಿಗಳು ಮನುಷ್ಯನ ಕರಾಳ ಭವಿಷ್ಯವನ್ನು ಕುರಿತ ಚಿತ್ರಣವಾಗಿದೆ. ಮನುಷ್ಯನಿಂದ ಪ್ರಾರಂಭವಾಗಿರುವ ಇಂತಹ ವಿನಾಶ ಪಥದ ಕ್ರಿಯೆಯು ಕೊನೆಗೆ ಮನುಷ್ಯನ ನಾಶಕ್ಕೇ ಮುನ್ನುಡಿಯಾಗಿರುತ್ತದೆ.

**ಕೊನೇ ಟಿಪ್ಪಣಿ :**

1) ಡಿ.ವಿ.ಜಿ. ಮಂಕುತಿಮ್ಮನ ಕಗ್ಗ, 2007, ಪುಟ–60; ಪದ್ಯ–217.
2) ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ವಿಸ್ಮಯ 1, 2011, ಪುಟ: 100.

ಪರಾಮರ್ಶನ ಗ್ರಂಥಗಳು :

1) ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪುಸ್ತಕ ಪ್ರಕಾಶನ, ಮೈಸೂರು – 2012.
2) ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕಾಡು ಮತ್ತು ಕ್ರೌರ್ಯ – 2013.
3) ಡಾ. ಡಿ. ಪುರುಷೋತ್ತಮ, ಕುವೆಂಪು ಮತ್ತು ತೇಜಸ್ವಿ : ಬದುಕು ಬರಹಗಳ ಸಾಮ್ಯ ಹಾಗೂ ವೈವಿಧ್ಯತೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – 2016.